ಮಾತನಾಡುತ್ತೀರಂತೆ, ಕೆಲಸವನ್ನು ಮಾಡುವುದಿಲ್ಲವಂತೆ ಎಂದು ಉಪದೇಶ ಮಾಡಿದ್ದಾರಲ್ಲಾ ಎನ್ನುವ ಮಾತುಗಳನ್ನು ಹೇಳಿಕೊಂಡು ರಿವ್ಯೂ ಮಾಡುತ್ತಾರೆಯೇ ಹೊರತು ನಿಜವಾಗಲೂ ಮೂರು ತಿಂಗಳಿಗೊಮ್ಮೆ ಡೆವಲಪ್‌ಮೆಂಟ್ ವರ್ಕ್ ಬಗ್ಗೆ ರಿವ್ಯೂ ಹಿಂದ ಏನು ನಡೆಯುತ್ತಿತ್ತು ಅದನ್ನು ಇವರು ಮಾಡುತ್ತಿಲ್ಲ. ಇದರಲ್ಲಿ ಇಂದಿನ ಸರ್ಕಾರ ಸಂಪೂರ್ಣವಾಗಿ ವಿಫಲಗೊಂಡಿದೆ. ಇನ್ನು ಮೇಲಾದರೂ ಕೂಡ ನಿಮ್ಮ ಗುರಿಯನ್ನು ಸಾಧಿಸುವ ಪ್ರಯತ್ನ ಮಾಡುತ್ತೀರಿ ಎಂದು ನಾವು ನಂಬಿದ್ದೇವೆ. ಬಹುಶ: ಅದು ಹುಸಿಯಾಗುತ್ತದೆ ಎಂದು ಹೇಳಿ ನನಗೆ ಈ ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಮಾನ್ಯ ಉಪಾಧ್ಯಕ್ಷರು ನನಗೆ ಇಷ್ಟು ಮಾತುಗಳನ್ನು ಆಡುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

9) <u>ಶಾಸನಾತ್ಮಕ ನಿರ್ಣಯ</u>

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):- ಇಂಧನ ಖಾತೆ ರಾಜ್ಯ ಸಚಿವರ ಪರವಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯಾವುದೇ ವೇಳೆಯಲ್ಲಿ ಮೇಲಿನ ಉಪ ನಿಯಮದ ಅನುಸಾರ ಪಡೆಯುವ ಸಾಲವು ಹತ್ತು ಕೋಟಿ ರೂಪಾಯಿಗಳಿಗಿಂತ ಅಧಿಕವಾದ ಪಕ್ಷದಲ್ಲಿ ವಿದ್ಯುಶ್ಚಕ್ತಿ ಸಾಲವು ಹತ್ತು ಕೋಟಿ ರೂಪಾಯಿಗಳಿಗಿಂತ ಅಧಿಕವಾದ ಪಕ್ಷದಲ್ಲಿ ವಿದ್ಯುಚ್ಛಕ್ತಿ (ಸರಬರಾಜು) ನಿಯಮ 1948 (ಕೇಂದ್ರ ನಿಯಮ 1948ರ ನಿಯಮ 54) ನಿಯಮ 65ರ ಉಪ ನಿಯಮ 3ರ ಅನುಸಾರ ಗರಿಷ್ಠ ಅಧಿಕ ಮೊತ್ತವನ್ನು ನಿಗಧಿಪಡಿಸಲು ರಾಜ್ಯ ವಿಧಾನ ಸಭೆಯ ಅನುಮೋದನೆ ಅಗತ್ಯವಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯಾವುದೇ ವೇಳೆಯಲ್ಲಿ ಪಡೆಯುವ ಸಾಲದಲ್ಲಿ 1995-96 ನೇ ಸಾಲಿಗೆ ಒಂದು ಸಾವಿರದ ಇನ್ನೂರೈವತ್ತು ಕೋಟಿ ರೂಪಾಯಿಗಳೆಂದು ಮತ್ತು 1996-97 ಹಾಗೂ ತದನಂತರಕ್ಕೆ ಒಂದು ಸಾವಿರದ ನಾಲ್ಕು ನೂರು ಕೋಟಿ ರುಪಾಯಿಗಳೆಂದು ನಿಗದಿಪಡಿಸಿದ್ದ ರಾಜ್ಯ ಸರ್ಕಾರದ ಪ್ರಸ್ತಾವನೆಗೆ ದಿನಾಂಕ 19-2-1997 ರಂದು ಕರ್ನಾಟಕ ವಿಧಾನ ಸಭೆಯ ಠರಾವುವನ್ನು ಒಪ್ಪುವ ಮೂಲಕ ಅನುಮೋದನೆ ನೀಡಲಾಗಿತ್ತು.

ಅದರಂತೆ, ಕರ್ನಾಟಕ ವಿದ್ಯುಶ್ಚಕ್ತಿ ಸರಬರಾಜು ನಿಯಮ 1948 ರ ನಿಯಮ 65 ಉಪನಿಯಮ 3ರ ಅನುಸಾರ ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ತನ್ನ ಅಧಿಸೂಚನೆ ಸಂಖ್ಯೆ: ಎಂಇ: 167: ಇಇಬಿ: 95 ದಿನಾಂಕ 26-2-1997 ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಯಾವುದೇ ವೇಳೆಯಲ್ಲಿ ಪಡೆಯುವ ಸಾಲದ ಮೊತ್ತವು 1995-96ನೇ ಸಾಲಿಗೆ ಒಂದು ಸಾವಿರದ ಇನ್ನೂರೈವತ್ತು ಕೋಟಿ ರೂಪಾಯಿಗಳೆಂದು ಮತ್ತು 1996-97 ನೇ ಸಾಲಿಗೆ ಹಾಗೂ ತದನಂತರಕ್ಕೆ ಒಂದು ಸಾವಿರದ ನಾಲ್ಕು ನೂರು ಕೋಟಿ ರೂಪಾಯಿಗಳೆಂದು ಉಪ ನಿಯಮ (1) ರನ್ವಯ ಆದೇಶಿಸಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 1997-98ನೇ ಸಾಲಿನಲ್ಲಿ ರೂ. 1493-00 ಕೋಟಿಗಳ ಹಣವನ್ನು ಮುಂದಾಲೋಚನೆಯಲ್ಲಿರುವ ಪ್ರಾಜೆಕ್ಟಗಳಿಗಾಗಿ ಪಡೆಯುವ ಸಾಲವನ್ನು ಪಾವತಿಸಬೇಕಾಗಿರುವುದರಿಂದ , ಆರ್‌ಇಸಿ, ಐಡಿಬಿಐ, ಪಿ ಎಫ್‌ಸಿ, ಮತ್ತು ವಾಣಿಜ್ಯ ಬ್ಯಾಂಕುಗಳ ಮುಖಾಂತರ ಹೆಚ್ಚುವರಿ ಸಾಲವನ್ನು ಪಡೆಯಬೇಕಾಗಿರುವುದರಿಂದ , ಇರುವ ಸಾಲದ ಮಿತಯನ್ನು ಹೆಚ್ಚಿಸಬೇಕಾಗುತ್ತದೆ. ಆದ್ದರಿಂದ ಕರ್ನಾಟಕ ವಿದ್ಯುಚ್ಛಕ್ತಿ (ಸರಬರಾಜು) ನಿಯಮ 1948ರ ನಿಯಮ

65 ಉಪನಿಯಮ 3 ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಯಾವುದೇ ವೇಳೆಯಲ್ಲಿ ಮೇಲಿನ ನಿಯಮದ ಉಪನಿಯಮ (1) ರಲ್ಲಿ ಪಡೆಯುವ ಸಾಲದ ಗರಿಷ್ಠ ಮೊತ್ತ 1997-98ನೇ ಸಾಲಿನಲ್ಲಿ ರೂ. 1400-00 ರಿಂದ ರೂ. 1750-00 ಕೋಟಿಯವರೆಗೆ ಹೆಚ್ಚಿಸಲು ಮತ್ತು ತದನಂತರ ನಿಗಧಿಪಡಿಸಲು ಕಳುಹಿಸಿರುವ ರಾಜ್ಯ ಸರ್ಕಾರದ ಪ್ರಸ್ತಾವನೆಗೆ ಈ ಮೂಲಕ ಕರ್ನಾಟಕ ವಿಧಾನ ಸಭೆಯು ಅನುಮೋದನೆ ನೀಡಲು ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ನಮಗೆ ಬ್ಯಾಕ್ ಗ್ರೌಂಡ್ ಕೊಟ್ಟು ಹೇಳಿದರೆ ಚೆನ್ನಾಗಿರುತ್ತಿತ್ತು. ಏಕೆಂದರೆ ತರಾತುರಿಯಲ್ಲಿ ಈ ರೆಸಲ್ಯೂಷನ್ ತಂದು ಮಾಡುವುದು....

ಉಪಾಧ್ಯಕ್ಷರು:- ವಿಷಯ ಪಟ್ಟಿಯಲ್ಲೆ ಇದು ಬಂದಿದೆಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ಏನಾಗಿದೆ ಎಂದರೆ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಸಾಲ ಕೊಡುವುದಕ್ಕೆ ತೆಗೆದುಕೊಳ್ಳುವುದಕ್ಕೆ ರೆಸಲ್ಯೂಷನ್ ಮಾಡಬೇಕು.

ಉಪಾಧ್ಯಕ್ಷರು:- ಬಸವಣ್ಣಪ್ಪನವರೇ, ತಾವು ಎಕ್ಸ್‌ಪ್ಲೈನ್ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಮಗೆ ಅಷ್ಟು ಹೇಳಿ, ಏಕೆಂದರೆ ನೀವು ಈಗಾಗಲೇ ರೈತರ ಮೇಲೆ ಎಲ್ಲರ ಮೇಲೆ ಕೂಡ ಹೆಚ್ಚಿಗೆ ಟ್ಯಾಕ್ಸ್ ಹಾಕಿಕೊಂಡು ಕೆ.ಇ.ಬಿ.ಯನ್ನು ಸೆಲ್ಫ್ ಸಫಿಷಿಯಂಟ್ ಎಂದು ಮಾಡಿಕೊಳ್ಳುತ್ತೇವೆಂದು ವಾಗ್ದಾನ ಕೊಟ್ಟಿದ್ದೀರಿ. ಮತ್ತೆ ಇಲ್ಲೆ ನಿಮ್ಮ ಕ್ರೆಡಿಟ್ ಲಿಮಿಟ್ ಏನಿದೆ ನೀವು ಅದನ್ನು ಹೆಚ್ಚಿಗೆ ಮಾಡಿಕೊಳ್ಳುತ್ತಿದ್ದೀರಿ. ಅಂದರೆ ಇದು ಬೇಕು ಮತ್ತು ಜನರಿಗೆ ಕರ ಭಾರ ಹಾಕಿ ಅದನ್ನು ವಸೂಲು ಮಾಡುವಂತಹ ಹಣ ಬೇಕು. ರಿಸೋರ್ಸ್ ಮೊಬಲೈಸೇಷನ್ ಹೆಸರಿನ ಮೇಲೆ ಜನರ ಮೇಲೆ ಎರಡು ಬಾರಿ ನೀವು ಟ್ಯಾಕ್ಸ್ ಹೇರಿದ್ದೀರಿ. ಪಂಪ್‌ಸೆಟ್ ಮೇಲೆ ಹಾಕಿದಿರೆ, ಏನು ಸಾಮಾನ್ಯ ಜನರು ವಿದ್ಯುತ್ ಬಳಕೆ ಮಾಡುತ್ತಿದ್ದರು, ಅವರ ಮೇಲೂ ಕೂಡ ಹಾಕಿದಿರಿ. ಮತ್ತು ಸಣ್ಣ ಕೈಗಾರಿಕೆಗಳಿಗೂ ಕೂಡ, ಈ ರೀತಿಯಾಗಿ ಯಾರಿಗೂ ಕೂಡ ಬಿಟ್ಟಿಲ್ಲ. ಅದರಿಂದ ಅಷ್ಟೊಂದು ಹಣವನ್ನು ತಾವು ಸಂಗ್ರಹಣೆ ಮಾಡುತ್ತೇವೆಂದು ಹೇಳಿಕೊಂಡ ಮೇಲೆ ಪುನ: ಇವತ್ತು ಕ್ರೆಡಿಟ್ ಲಿಮಿಟ್‌ನ್ನು ತಾವು ಎನ್‌ಹಾನ್ಸ್ ಮಾಡಿಕೊಳ್ಳುವುದಕ್ಕೆ ಗ್ಯಾರಂಟಿ ಕೊಡಬೇಕೆಂದು ರೆಸಲ್ಯೂಷನ್ ತಂದಿದ್ದೀರಿ. ಅದನ್ನು ಹೇಳಬೇಕಾಗುತ್ತದೆ. ಅದರಿಂದ ಎಷ್ಟು ಹಣ ಬರುತ್ತದೆ? ನಿಮಗೆ ಕೊರತೆ ಎಷ್ಟು ಬೀಳುತ್ತದೆ? ಏಕೆ ಇದನ್ನು ಮಾಡಿದಿರಿ ಎಂದು ಹೇಳಬೇಕು? ಕೇವಲ ಒಂದು ರೆಸಲ್ಯೂಷನ್ ಮಾಡಿ ಮುಂದೆ ಓದಿದರೆ ನಮಗೆ ಹೇಗೆ ಗೊತ್ತಾಗುತ್ತದೆ?

ಉಪಾಧ್ಯಕ್ಷರು:- ನೀವು ಎಕ್ಸ್‌ಪ್ಲೈನ್ ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡಿ. ಇಲ್ಲದಿದ್ದರೆ ಸೋಮವಾರ ಮಾಡುತ್ತೇನೆಂದು ಹೇಳಿ. ಮಾನ್ಯ ಬಸವಣ್ಣಪ್ಪನವರು ಎಕ್ಸ್‌ಪ್ಲೈನ್ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಸೋಮವಾರ ಮಾಡುತ್ತಾರೆ.

ಶಾಸಕರ ನಿರ್ಣಯವನ್ನು ಮಂಡಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ಇದು ಕಗ್ಗತ್ತಲಿನಲ್ಲಿ ಇಟ್ಟಹಾಗೆ ಆಗುತ್ತದೆ.